# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 09.11.2021 ರಂದು ನಡೆದ ಸಭೆಯ ನಡವಳಿಗಳು**

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: **ಬಿ12(5)ಪಿಆರ್/35/2020-21/21-09-2020** ರ ಆದೇಶದಂತೆ ದಿನಾಂಕ: 09.11.2021 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ **ಜೋಗುಪಾಳ್ಯ ವಾರ್ಡ್ ಸಂಖ್ಯೆ-89 ಸಭೆ Welcome Hotel near Hosmat Hospital,** ಬೆಂಗಳೂರು- ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು,

ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯ ದಿನಾಂಕ:09.11.2021 ರಂದು ನಡೆಯಿತು.

## ಸಭೆಗೆ ಹಾಜರಿದ್ದವರ ವಿವರಗಳು

1) ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ, ಅಧ್ಯಕ್ಷರು.
2) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
3) ಶ್ರೀ. ಮೂರ್ತಿ, ವಾರ್ಡ್ ಸಮಿತಿಯ ಕಾರ್ಯದರ್ಶೀ, ಸಹಾಯಕ ಅಭಿಯಂತರರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಬೆಸ್ಕಾಂ ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
4) ವಾರ್ಡ್ ಸಮಿತಿ ಸದಸ್ಯರಾದ, ಶ್ರೀಮತಿ ಆಶಾ ಆಲ್ವಿನ್, ಶ್ರೀಮತಿ.ಗಾಯತ್ರಿ, ಶ್ರೀ ಹೆಮಂತ್‌ನಾಗ್,ಶ್ರೀ ರಮೇಶ್ ರೆಡ್ಡಿ, ಶ್ರೀ ಉಮೇಶ್ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರು ಮತ್ತು ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

## ವಾರ್ಡ್ ಸಮಿತಿ ಸದ್ಯಸರ ದೂರುಗಳು:

1. ವಾರ್ಡ್ ಸಮೀತಿ ಸದ್ಯಸ್ಯರಾದ ಶ್ರೀ ರಮೇಶ್ ರೆಡ್ಡಿ ರವರು ಲಿಖಿತ ರೂಪದಲ್ಲಿ ದೂರುಗಳ ಪಟ್ಟಿಯನ್ನು ನೀಡುತ್ತಾ ಅದರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿರುತ್ತಾರೆ,

   1) ಮಾರಪ್ಪ ರಸ್ತೆ ಮತ್ತು ಮುನಿಸ್ವಾಮಪ್ಪ ರಸ್ತೆಯಲ್ಲಿ ಮಳೆಯು ಬಂದರೆ ಮಳೆ ನೀರು ಸಾರಾಗವಾಗಿ ಹರಿಯಲು ಆಗದೆ ರಸ್ತೆಯು ಕೆರೆಯಂತಾಗುತ್ತದೆ. ಇದರಿಂದ ನಾಗರಿಕರಿಗೆ ಬಹಳ ಕಷ್ಟವಾಗುತ್ತಿದೆ ಇದನ್ನು ಕೂಡಲೆ ಸರಿಪಡಿಬೇಕೆಂದು ಕೇಳಿರುತ್ತಾರೆ-ಸಹಾಯಕ ಅಭಿಯಂತರರು ಸ್ಥಳವನ್ನು ಪರಿಶೀಲಿಸಿ ಕ್ರಮ ವಹಿಸುವುದು.

2) ಜಿ ನಂ.12 ಬೀದಿ ಹಾಗೂ ಜಿ ನಂ.5ನೇ ಬೀದಿ ಜೋಗುಪಾಳ್ಯ ರಸ್ತೆಗಳನ್ನು ಡಾಂಬರಿಕರಣಗೊಳಸಬೇಕೆಂದು ಕೇಳರುತ್ತಾರೆ. -ಸಹಾಯಕ ಅಭಿಯಂತರರು ಸ್ಥಳವನ್ನು ಪರಿಶೀಲಿಸಿ ಕ್ರಮ ವಹಿಸುವುದು.
3) ಮೋಟಪ್ಪನ ಪಾಳ್ಯ, 6ನೇ ಬೀದಿ, ಮತ್ತು ಅಪ್ಪಾರೆಡ್ಡಿ ಪಾಳ್ಯ ರಸ್ತೆಗಳನ್ನು ಡಾಂಬರಿಕರಣಗೊಳಸಬೇಕೆಂದು ಕೇಳರುತ್ತಾರೆ.-ಸಹಾಯಕ ಅಭಿಯಂತರರು ಸ್ಥಳವನ್ನು ಪರಿಶೀಲಿಸಿ ಕ್ರಮ ವಹಿಸುವುದು.
4) ಕೋವಿಡ್-19 ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸುವ ಕಾರಣ ಆರೋಗ್ಯಾಧಿಕಾರಿಗಳು ವಾರ್ಡಿನಲ್ಲಿ ಬ್ಲೀಚಿಂಗ್ ಪೌಡರ್ ಮತ್ತು ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಬೇಕೆಂದು ಕೇಳರುತ್ತಾರೆ-ಕೀರಿಯ ಆರೋಗ್ಯಾಧಿಕಾರಿಗಳು ಕ್ರಮ ವಹಿಸುವುದು.

2. ವಾರ್ಡಿನ ಸಮೀತಿ ಸದಸ್ಯರಾದ ಶ್ರೀ ಹೆಮಂತ್ ನಾಗ್ ರವರು ಮಾತನಾಡುತ್ತಾ ಇಲ್ಲೆತೋಪಿನಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು ಹಾಗೂ ರಸ್ತೆಯನ್ನು ಡಾಂಬರಿಕರಣಗೊಳಸಬೇಕೆಂದು ಕೇಳರುತ್ತಾರೆ-ಸಹಾಯಕ ಅಭಿಯಂತರರು ಮತ್ತು ಬೆಸ್ಕಾಂ ರವರು ಕ್ರಮ ವಹಿಸುವುದು.
3. ವಾರ್ಡಿನ ನಾಗರಿಕರು ಮಾತನಾಡುತ್ತಾ ಅಪ್ಪಾರೆಡ್ಡಿ ಪಾಳ್ಯ ಹಾಗೂ ಮೊಟ್ಟಪ್ಪನಪಾಳ್ಯದಲ್ಲಿ ಪದೇ ಪದೇ ವಿದ್ಯುತ್ ಇಲ್ಲದಿರುವುದು ಹಾಗೂ ಅಲ್ಲಿ ಬೀದಿ ದೀಪಗಳು ಸಹಾ ಸರಿಯಾಗಿ ಉರಿಯುತ್ತಿಲ್ಲದ ಕಾರಣ ಸರಿಪಡಿಸಬೇಕೆಂದು ಕೇಳರುತ್ತಾರೆ. ಬೆಸ್ಕಾಂ ಅಧಿಕಾರಿಗಳು ಹಾಗೂ ಬಿಬಿಎಂಪಿ ಎಲೆಕ್ಟ್ರೀಕಲ್ ವಿಭಾಗದವರು ಕ್ರಮ ವಹಿಸುವುದು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಸಿದರು.

| | |
|---|---|
| | ಕಾರ್ಯದರ್ಶಿ |
| **ನೊಡೆಲ್ ಅಧಿಕಾರಿಗಳು** | **ಸಹಾಯಕ ಅಭಿಯಂತರರು** |
| **ವಾರ್ಡ್ ಸಂಖ್ಯೆ-89- ಜೋಗುಪಾಳ್ಯ** | ವಾರ್ಡ್ ಸಂಖ್ಯೆ-89- ಜೋಗುಪಾಳ್ಯ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಪ್ರತಿಯನ್ನು,

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ